MAY 19, 2025
ALL INDIA RADIO- DHARWAD
PRADESH SAMACHARA (KANNADA) 12.00 NOON

ರಾಜ್ಯಾದ್ಯಂತ ಗುಡುಗು, ಮಿಂಚು ಸಹಿತ, ಮಲೆನಾಡು, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ, ಚದುರಿದಂತೆ ಅಥವಾ ವ್ಯಾಪಕವಾಗಿ, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದ್ದು, ಕರಾವಳಿ ಜಿಲ್ಲೆಗಳಲ್ಲಿ ಚದುರಿದಂತೆ ವ್ಯಾಪಕ ಮಳೆಯಾಗುವ ನಿರೀಕ್ಷೆ ಇದೆ ಎಂದು, ತಿಳಿಸಿದೆ.

<><><>

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ, ರಾಯಚೂರು ಸೇರಿದಂತೆ ರಾಜ್ಯದ ಹಲವೆಡೆ ನಿನ್ನೆ ಬಿರುಸಿನ ಮಳೆಯಾಗಿದೆ. ಕಳೆದ 24 ಗಂಟೆಗಳಲ್ಲಿ ಧಾರವಾಡ, ಉತ್ತರ ಕನ್ನಡ, ಬಳ್ಳಾರಿ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಬಿಸಿಲ ಧಗೆ ಕಡಿಮೆಯಾಗಿದೆ. ಬೆಂಗಳೂರಿನಲ್ಲೂ ನಿನ್ನೆ ರಾತ್ರಿ ಭಾರಿ ಮಳೆಯಾಗಿದ್ದು, ನಾಲ್ಕು ದಿನ ಭಾರಿ ಗಾಳಿ ಸಹಿತ ಮಳೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದಿನಿಂದ 22 ರವರೆಗೆ ಯೆಲ್ಲೋ ಅಲರ್ಟ ಘೋಷಿಸಲಾಗಿದೆ.

<><><>

ಪೆಹಲ್ಗಾಮ್‌ನಲ್ಲಿ ಅಮಾಯಕ 26 ಜನರನ್ನು ಹತ್ಯೆ ಮಾಡಿದ ಉಗ್ರರಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, ದೇಶದ ಯೋಧರು, ಭಾರತದ ಸಾರ್ವಭೌಮತ್ವವನ್ನು, ಇಡೀ ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ ಎಂದು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ತುಮಕೂರಿನಲ್ಲಿ ಆಯೋಜಿಸಿದ್ದ, 'ತಿರಂಗಾ ಯಾತ್ರೆ'ಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಾಕಿಸ್ಥಾನದ ನಡೆಯನ್ನು, ದೇಶದ ಇತಿಹಾಸದ ಅನೇಕ ಘಟನಾವಳಿಗಳನ್ನು ಭಾರತೀಯರು ಓದಿ, ಅರ್ಥ ಮಾಡಿಕೊಂಡಿದ್ದಾರೆ, ಎಂದರು.

<><><>

'ಆಪರೇ ನ್ ಸಿಂಧೂರ್' ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಸೈನಿಕರನ್ನು ಅಭಿನಂದಿಸಲು, ದೇಶಾದ್ಯಂತ ತಿರಂಗಾ ಯಾತ್ರೆ ಯಶಸ್ವಿಯಾಗಿ ನಡೆಯುತ್ತಿದೆ ಎಂದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತುಮಕೂರಿನಲ್ಲಿ ಹೇಳಿದ್ದಾರೆ.

<><><>

ಯಾದಗಿರಿಯ ಮೈಲಾಪುರದಿಂದ, ಮಹಾತ್ಮ ಗಾಂಧಿ ವೃತ್ತದವರೆಗೆ, ತಿರಂಗಾ ಯಾತ್ರೆ ನಡೆಯಿತು. ಇಪ್ಪತ್ತಕ್ಕೂ ಅಧಿಕ ವಿಶ್ರಾಂತ ಸೈನಿಕರು, ಪಾಲ್ಗೊಂಡಿದ್ದರು.

<><><>

ಆಪರೇಶನ್ ಸಿಂದೂರ ಕಾರ್ಯಾಚರಣೆಯಲ್ಲಿ, ಭಾರತೀಯ ಸೇನೆ ಯಶಸ್ವಿಯಾದ ಹಿನ್ನಲೆ, ಹುಬ್ಬಳ್ಳಿ ಧಾರವಾಡ ಏರ್‌ಫೋರ್ಸ್ ಅಸೋಸಿಯೇಶನ್ ಹಾಗೂ ಸಶಸ್ತ್ರ ಪಡೆಗಳಿಂದ ನಗರದಲ್ಲಿ ತಿರಂಗಾ ಯಾತ್ರೆ ನಡೆಸಲಾಯಿತು. ನಗರದ ಕಡಪಾ ಮೈದಾನದಿಂದ ಆರಂಭಗೊಂಡ ಯಾತ್ರೆ ಜುಬಿಲಿ ವೃತ್ತ, ಉಳವಿ ಚೆನ್ನಬಸವೇಶ್ವರ ವೃತ್ತ, ಜಿಲ್ಲಾಧಿಕಾರಿ ಕಚೇರಿ ಮಾರ್ಗವಾಗಿ ಕಾರ್ಗಿಲ್ ಸ್ತೂಪ್ ತಲುಪಿತು. ಮಾಜಿ ಸೈನಿಕರು, ವಿದ್ಯಾರ್ಥಿಗಳು ಕೈಯಲ್ಲಿ ತ್ರಿವರ್ಣ ಧ್ವಜ ಹಿಡಿದು ದೇಶಭಕ್ತಿ ಘೋಷಣೆಗಳನ್ನು ಕೂಗುತ್ತಾ ಯಾತ್ರೆಯಲ್ಲಿ ಪಾಲ್ಗೊಂಡರು.

<><><>

ಯುದ್ಧದ ಭೀತಿ, ಮತ್ತು ತುರ್ತು ಪರಿಸ್ಥಿತಿ ನಿರ್ವಹಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬ್ಲ್ಯಾಕ್ ಅಣಕು ಪ್ರದರ್ಶನ ಆಯೋಜಿಸಿತ್ತು. ಬೆಳಗಾವಿಯ ಹನುಮಾನ ನಗರ ಮತ್ತು ಕುವೆಂಪು ನಗರದಲ್ಲಿ, ಮಹಾನಗರಪಾಲಿಕೆ ಆಯುಕ್ತೆ ಶುಭಾ.ಬಿ ನೇತೃತ್ವದಲ್ಲಿ 15 ನಿಮಿ  ಗಳವರಗೆ ಬ್ಲ್ಯಾಕ್‌ಔಟ್ ಅಣಕು ಪ್ರದರ್ಶನ ನಡೆಸಲಾಯಿತು.

<><><>

ರಾಸುಗಳ ಸಾಕಣೆಯಲ್ಲಿ, ಕರ್ನಾಟಕ ರಾಜ್ಯ, ದೇಶಕ್ಕೆ ಪ್ರಥಮ ಸ್ಥಾನದಲ್ಲಿದೆ. ರಾಜ್ಯದಲ್ಲಿ ಬೆಳಗಾವಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದು, ಹಾಸನ ಜಿಲ್ಲೆ ಎರಡನೇ ಸ್ಥಾನದಲ್ಲಿದೆ ಎಂದು, ಪಶು ಸಂಗೋಪನಾ ಖಾತೆ ಸಚಿವ ಕೆ.ವೆಂಕಟೇಶ ತಿಳಿಸಿದ್ದಾರೆ. ಹಾಸನದ ಸಂತೇಪೇಟೆ ವೃತ್ತದಲ್ಲಿ, ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರದ ಶಂಕುಸ್ಥಾಪನೆ ನೆರವೇರಿಸಿ, ಮಾತನಾಡಿದ ಅವರು, ಕೃಷಿ ಜೊತೆಗೆ ಹೈನುಗಾರಿಕೆಯನ್ನೂ ಅವಲಂಬಿಸಿರುವ ರೈತರಿಗೆ, ಅನುಕೂಲ ಕಲ್ಪಿಸಲು, ಒಂದು ಲೀಟರ್ ಹಾಲಿಗೆ, ಒಟ್ಟು 7 ರೂಪಾಯಿ ಹೆಚ್ಚಿಸಲಾಗಿದೆ ಎಂದರು.

<><><>

50 ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆ ಹೊಂದಿರುವ, ಬೆಂಗಳೂರಿನ ದೇವನಹಳ್ಳಿ, ಆಪಲ್ ಐಫೋನ್ ತಯಾರಿಕಾ ಘಟಕ, ಜೂನ್ ತಿಂಗಳಿನಲ್ಲಿ ಕಾರ್ಯಾರಂಭ ಮಾಡಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ.ಪಾಟೀಲ, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, ಸ್ಪಷ್ಟ ಪಡಿಸಿದ್ದಾರೆ.

ಅಮೆರಿಕದ ಅಧ್ಯಕ್ಷ, ಡೊನಾಲ್ಡ್ ಟ್ರಂಪ್, ಇತ್ತೀಚೆಗೆ ಕತಾರ್‌ನ ದೋಹಾದಲ್ಲಿ, ಆಪಲ್ ಕಂಪೆನಿ ಸಿ.ಇ.ಒ. ಟಿಮ್ ಕುಕ್ ಭೇಟಿಯ ವೇಳೆ ನೀಡಿದ ಹೇಳಿಕೆಗೂ, ಭಾರತದಲ್ಲಿ ಐಫೋನ್ ಉತ್ಪಾದನೆಗೂ, ಸಂಬಂಧವಿಲ್ಲ, ಎಂದಿದ್ದಾರೆ.

<><><>

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ  ಡಾ.ನಾಗಲಕ್ಷ್ಮಿಬಾಯಿ ಚೌಧರಿ ಅವರು ಇಂದು ಚಿಕ್ಕಬಳ್ಳಾಪುರ ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಮಧ್ಯಾಹ್ನ 1 ಗಂಟೆಗೆ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗರ್ಕಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾಚಹಳ್ಳಿ ಗ್ರಾಮದ ಪರಿಶಿ ್ಟ ಜಾತಿ ಕಾಲೋನಿಗೆ,    ನಂತರ ಮಧ್ಯಾಹ್ನ 3 ಗಂಟೆಗೆ ಶಿಡ್ಲಘಟ್ಟ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ.

<><><>

ಮಾನವ ಮತ್ತು ಕಾಡಾನೆ ಸಂಘ ್ಷ ತಗ್ಗಿಸಲು, ಕರ್ನಾಟಕದ ಆರು ಪಳಗಿಸಿದ ಆನೆಗಳನ್ನು, ನಾಡಿದ್ದು 21 ರಂದು, ಆಂಧ್ರ ಪ್ರದೇಶಕ್ಕೆ, ಉಡುಗೊರೆಯಾಗಿ ನೀಡಲು, ರಾಜ್ಯ ಸರ್ಕಾರ ನಿರ್ಧರಿಸಿದೆ. ಕೊಡಗು ಜಿಲ್ಲೆ, ದುಬಾರೆ ಆನೆ ಶಿಬಿರದಿಂದ, ರಂಜನ್, ದೇವ, ಮಾಸ್ತಿ, ಕರುನಾಡು ಮತ್ತು ಶಿವಮೊಗ್ಗ ಜಿಲ್ಲೆ ಸಕ್ರೆಬೈಲು ಶಿಬಿರದಿಂದ, ಕೃ ್ಣ ಹಾಗೂ ಅಭಿಮನ್ಯು ಹೆಸರಿನ ಆನೆಗಳನ್ನು, ಚಿತ್ತೂರಿಗೆ ಕಳುಹಿಸಲು, ಸಿದ್ಧತೆ ನಡೆದಿದೆ.

<><><>

ಉತ್ತರಕನ್ನಡ ಜಿಲ್ಲೆ, ಹೊನ್ನಾವರದ ಕಾಸರಕೋಡ ಬಂದರಿನಲ್ಲಿ, ಮೀನುಗಾರಿಕೆ ಅಭಿವೃದ್ಧಿ ನಿಗಮದ, ನೂತನ ಡೀಸೆಲ್ ಬಂಕ್‌ನ್ನು ಸಚಿವ ಮಂಕಾಳ ವೈದ್ಯ ಉದ್ಘಾಟಿಸಿದರು.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>